ಮನೆ ವಾತಾವರಣ ಕಣಮ್ಮ. ಸದಾಕಾಲ ಒಬ್ರಲ್ಲ ಒಬ್ರು ಸಾಹಿತಿಗಳು ನಮ್ಮನೆಗೆ ಬರೋರು. ನನ್ಹೆಸ್ರು 'ಅನು' ಅಂತ. ನಮ್ಮಪ್ಪನೇ 'ವೈದೇಹಿ' ಅಂತ ಪೆನ್ ನೇಮ್ ಇಟ್ಕೋ ಅಂದ್ರು. ನಮ್ಮೆಜಮಾನ್ರು ಕನ್ನಡದೋರೆ. ಆದ್ರೆ ಹುಟ್ಟಿ ಬೆಳೆದಿದ್ದೆಲ್ಲ ಮಹಾರಾಷ್ಟ್ರದಲ್ಲಿ. ಹಾಗಾಗಿ ಕನ್ನಡ ಮಾತಾಡಿದ್ರೂ ಓದಿ ಬರೆದು ಎಲ್ಲ ಬರಲ್ಲಮ್ಮ. ನಾನೂ ತಮಾಷೆ ಮಾಡ್ತಿರ್ತೀನಿ. 'ಏನ್ರೀ, ಎಲ್ರೂ ನನ್ನ ಬರಹ ಓದಿ ಮೆಚ್ಚಿ ಸನ್ಮಾನ, ಪ್ರಶಸ್ತಿ ಕೊಟ್ರೆ ನೀವು ಮಾತ್ರ ಇನ್ನೂ ಒಂದೂ ಪುಸ್ತಕ ಓದ್ಲಿಲ್ಲ ಇದುವರ್ಗೂ' ಅಂತ.

'ಆದರೆ ಆಂಟಿ, ನಾನು ಇದುವರ್ಗೂ ವೈದೇಹಿ ಕುಂದಾಪುರದವರು ಅಂದ್ಕೊಂಡಿದ್ದೆ, ಆದ್ರೆ ನೀವು ನೋಡಿದ್ರೆ ಮೈಸೂರು... ಅದ್ ಹೇಗ್ ಸಾಧ್ಯ?' – ಸ್ವಲ್ಪ ಅನುಮಾನ ಬೆರೆತ ಧ್ವನಿಯಲ್ಲಿ ನಾನು ಕೇಳುತ್ತಿದ್ದಂತೆಯೇ, 'ಅಯ್ಯೋ, ಇಲ್ವಲ್ಲ... ನಮ್ಮ ಭಾಷೆ, ಶೈಲಿ, ನುಡಿಗಟ್ಟು ಎಲ್ಲಾದ್ರಲ್ಲೂ ಗೊತ್ತಾಗುತ್ತಲ್ಲ, ನಮ್ಮ ಹುಟ್ಟೂರಿನ ಮಣ್ಣಿನ ವಾಸನೆಯೇ ನಮ್ಮ ಬರಹದಲ್ಲಿರೋದು', ನನ್ನ ಮಾತನ್ನು ತುಂಡರಿಸುತ್ತಾ ತಮ್ಮ ಮಾತಿನ ಓಘವನ್ನು ಹಾಗೇ ಮುಂದುವರಿಸಿದರು ಆಕೆ. ಅಷ್ಟರಲ್ಲೇ ಬಸ್ಸು ಊಟಕ್ಕೆಂದು ಸಕಲೇಶಪುರದಲ್ಲಿ ನಿಂತಿತ್ತು. ಇಬ್ಬರೂ ಹೋಗಿ ಹೋಟೆಲ್ ವೈಭವ್‌ನಲ್ಲಿ ಊಟ ಮಾಡಿ ಬಂದೆವು. ಎರಡು ಸೌತ್ ಇಂಡಿಯನ್ ಥಾಲಿ ಆರ್ಡರ್ ಮಾಡಿ ಕೂತು ಊಟ ಬರುವವರೆಗೂ ತಮ್ಮ ಮಾತನ್ನು ಮುಂದುವರಿಸಿಯೇ ಇದ್ದರು ಈ ವಾಚಾಳಿ ಆಂಟಿ. ನನಗಂತೂ ಅವರ ನಾನ್ ಸ್ಟಾಪ್ ಮಾತು, ವಿಷಯ ವ್ಯಾಪ್ತಿ ಕಂಡು ದಿಗ್ಭ್ರಮೆಯಾಗಿತ್ತು. ಬಾಯಲ್ಲಿ ಅನ್ನ ಜಗಿಯುವಾಗ ಅನಿವಾರ್ಯವಾಗಿ ಸುಮ್ಮನಿದ್ದ ಆಕೆ ಅರೆಕ್ಷಣವನ್ನೂ ವ್ಯರ್ಥಮಾಡದೆ ಮಾತಿನ ಮನೆ ಕಟ್ಟುವುದರಲ್ಲಿ ನಿರತರಾಗಿದ್ದರು. ಮಧ್ಯೆ ಮಧ್ಯೆ ನನ್ನ ಗಮನ ಅತ್ತಿತ್ತ ಹೋದರೂ ಅದಕ್ಕವರು ತಲೆ ಕೆಡಿಸಿಕೊಳ್ಳಲಿಲ್ಲ. ಮತ್ತೊಮ್ಮೆ ನಾವಿಬ್ಬರೂ ಟಾಯ್ಲೆಟ್ ಸಮಸ್ಯೆಯನ್ನು ಸಮರ್ಥವಾಗಿ ಎದುರಿಸಿ ನಮ್ಮ ರಥವೇರಿದೆವು. ಆಂಟಿಯ ಮಾತುಕತೆಗೂ ಸಾಹಿತಿಯ ವ್ಯಕ್ತಿತ್ವಕ್ಕೂ ಸ್ವಲ್ಪವೂ ಹೊಂದಾಣಿಕೆ ಕಾಣಿಸದೆ ನಾನು ಗೊಂದಲಕ್ಕೊಳಗಾಗಿದ್ದೆ. ಅದೂ ಅಲ್ಲದೆ ಹಿಂದೊಮ್ಮೆ ಎಲ್ಲೋ ನೋಡಿದ ವೈದೇಹಿಯ ಚಿಕ್ಕದೊಂದು ಫೋಟೋ ನನ್ನ ಮನಸ್ಸಲ್ಲಿನ್ನೂ ಅಳಿಸಿ ಹೋಗಿರಲಿಲ್ಲ. ಇಂಥಾ ವಿಷಯದಲ್ಲಿ ನನ್ನ ನೆನಪು ಸ್ವಲ್ಪ ಆಳವಾದದ್ದೇ. ಬೆಳ್ಳಗೆ ದುಂಡಗೆ ಮುದ್ದಾಗಿರುವ ಆಂಟಿಗೂ, ಸ್ವಲ್ಪ ಕಪ್ಪು, ಕೃಶದೇಹಿ ವೈದೇಹಿಗೂ ಯಾವ ಹೋಲಿಕೆಯೂ ಕಾಣಲಿಲ್ಲ. ಅಸ್ಪಷ್ಟ ಅನುಮಾನ ಹೊತ್ತೇ ಮುಂದಿನ ಅವರ ಮಾತುಗಳನ್ನು ಅರ್ಧಂಬರ್ಧ ಕೇಳುತ್ತಾ 'ಇಷ್ಟೊಳ್ಳೆ ಆಂಟಿ ಸುಳ್ಳು ಯಾಕೆ ಹೇಳ್ತಾರೆ?' ಎಂದು ಪ್ರಶ್ನಿಸಿಕೊಳ್ಳುತ್ತಾ ನನ್ನಷ್ಟಕ್ಕೇ ಯೋಚಿಸತೊಡಗಿದ್ದೆ. ಹೊಟ್ಟೆ ತುಂಬಿದ್ದರೂ ತಲೆಯಲ್ಲಿ ಪ್ರಶ್ನೆಗಳು ತಾಳ ಹಾಕಿ ಕುಣಿಯತೊಡಗಿದ್ದವು. ಊಟ ಮುಗಿಸಿ ಆಂಟಿ ಮಾತಿಗಿಳಿದ ಸ್ವಲ್ಪ ಹೊತ್ತಲ್ಲೇ ನಿದ್ದೆ ಆವರಿಸಿ ಬಿಟ್ಟಿತ್ತು ನನ್ನನ್ನು. ಉಂಡಹೊಟ್ಟೆ ಕಣ್ಣೆಳೆಯದೇ ಇರುತ್ತದೆಯೇ? ಮೊದಲೇ ಮಾತಾಡಿ ಮಾತಾಡಿ ಸುಸ್ತಾಗಿದ್ದ ವೈದೇಹಿ ಆಂಟಿಯೂ ಮಲಗಿದರು.

ಕರಾವಳಿಯ ಬಿಸಿಗಾಳಿ ಬೀಸಿ, ಮೈ ಬೆವರಿ, ಬಾಯಾರಿ ಮಧ್ಯಾಹ್ನದ ಜೊಂಪು ನಿದ್ರೆ ಹಾರಿಹೋಯಿತು. ಆಂಟಿಗೂ ಹಾಗೇ ಆಗಿರಬೇಕು. ಎದ್ದವರೇ ನೀರಿನ ಬಾಟಲಿಗೆ ಕೈ ಹಾಕಿದರು.

'ಆಂಟಿ, ನೀವು ಕಥೆ ಬರೆಯೋ ಬಗ್ಗೆ ಹೇಳಿ. ನಿಮಗೆ ಇನ್‌ಸ್ಪಿರೇಶನ್ ಎಲ್ಲಿಂದ ಸಿಗುತ್ತೆ? ಹೇಗೆ ಗ್ರೌಂಡ್ ವರ್ಕ್ ಮಾಡ್ತೀರಾ?' – ಇನ್ನೇನು ಮಂಗಳೂರು ಬಂದುಬಿಡುವ ಆತಂಕದಲ್ಲಿ ನಾನು ಕೇಳಬೇಕೆಂದುಕೊಂಡಿದ್ದ ಮುಖ್ಯವಾದ ಪ್ರಶ್ನೆಗಳನ್ನು ಕೇಳಿಬಿಟ್ಟೆ. ನನ್ನ ಮಾತು ಮುಗಿಯುವುದರೊಳಗೇ 'ಅಯ್ಯೋ ಕಥೆಗೇನಮ್ಮಾ, ಎಲ್ಲಿಂದನಾದ್ರೂ ವಸ್ತು–ವಿಷಯ ಸಿಕ್ಬಿಡುತ್ತೆ. ಇದ್ದಕ್ಕಿದ್ದಂತೆ ಬರೆಯೋ ಸ್ಫೂರ್ತಿ ಸಿಕ್ಬಿಡುತ್ತೆ. ನಮ್ಮೆಜಮಾನ್ರ ಪಿ.ಎ ಒಬ್ನಿದಾನೆ, ಹೆಗ್ಡೆ ಅಂತ. ಅವನಿಗೂ ಓದೋ ಹುಚ್ಚು. ನನ್ನ ಪುಸ್ತಕಾನೆಲ್ಲ ಪ್ರಿಂಟ್ ಆಗ್ತಿದ್ದಾಂಗೆ ಬೇಕು ಅಂತ ಕೇಳಿ ತಗೊಂಡೂ ಓದ್ತಾನೆ. ಮನೆಗೆ ಬರೋವಾಗ ಫೋನ್ ಮಾಡಿ ಕೇಳ್ತಾನೆ, ಏನ್ ಮೇಡಂ, ಪೆನ್ನು ಕೈಲಿದೆಯೋ ಟೇಬಲ್ ಮೇಲಿದೆಯೋ ಅಂತ. ನಿಮಗೆ ಡಿಸ್ಟರ್ಬ್ ಮಾಡೋಕೆ ನಂಗಿಷ್ಟ ಇಲ್ಲ ಮೇಡಂ ಅಂತಾನೆ. ಈಗ ಅಮೇರಿಕಾದಿಂದ ಬಂದ ಮೇಲೆ ಅಲ್ಲಿಂದ ಸ್ಫೂರ್ತಿ ತಗೊಂಡು ಏನಾದ್ರೂ ಬರೀಲೇಬೇಕು ಅಂತ ಮಗಳು ಹೇಳಿದಾಳೆ. ನಮ್ಮೆಜಮಾನ್ರು ಗೋವಿನಂಥ ಮನುಷ್ಯ ಕಣಮ್ಮ. ನಾನು ಕತೆ ಬರೆಯೋಕೆ ಕೂತ್ರೆ ಕಾಫಿ–ತಿಂಡೀನೂ ಕೇಳಲ್ಲ... ಅಂಥಾ ಮನುಷ್ಯ. ಮಕ್ಕಳಿಬ್ರೂ ಬೆಳೆದು ದೊಡ್ಡೋರಾಗಿ ಅಮೇರಿಕಾ ಸೇರಿದ್ಮೇಲೆ ನಂಗಿನ್ನೇನಮ್ಮಾ ಕೆಲ್ಸ? ಸಮಯ ಹಾಳು ಮಾಡೋದು ನಂಗೊಂಚೂರು ಇಷ್ಟ ಇಲ್ಲಮ್ಮ. ಏಷ್ಟೊಂದು ಬರಿಯೋದಿರುತ್ತೆ...'

'ಅಬ್ಬಬ್ಬಾ, ಈ ಮಾತಾಳಿ ಆಂಟಿ ಬಾಯಿ ಮುಚ್ಕೊಂಡು ಬರೆಯೋದಾದ್ರೂ ಹೇಗೆ? ಎಷ್ಟೊಂದು ಮಾತಾಡ್ತಾರಲ್ಲಪ್ಪ... ಸಾಹಿತಿಗಳ ಲಕ್ಷಣಾನೇ ಇಲ್ಲ, ಪಕ್ಕದ್ಮನೆ ಆಂಟಿ ಇಮೇಜು ಇವರದ್ದು.' ನನ್ನ ಮನಸ್ಸು ತನ್ನದೇ ಯೋಚನೆ ನಡೆಸಿತ್ತು. ಇತ್ತ ಮಾತಿನ ಪ್ರವಾಹ ಹರಿಯುತ್ತಲೇ ಇತ್ತು. 'ಯಾರ್‍ರೀ, ಲಾಲ್‌ಬಾಗ್ ಯಾರ್‍ರೀ...' ಕಂಡಕ್ಟರ್ ಜೋರು ಧ್ವನಿಗೆ ಫಕ್ಕನೆ ಈ ಪ್ರಪಂಚದ ಅರಿವಾಯ್ತು. ದಾರಿ ಸವೆದದ್ದೇ ಗೊತ್ತಾಗದಷ್ಟು ಮಾತಾಡಿದ್ದರು ಆಂಟಿ. ಈ ಮಾತಿನ ಭರಾಟೆಯಲ್ಲಿ ಅವರ ಮನೆ ಅಡ್ರೆಸ್, ಫೋನ್ ನಂಬರ್ ಯಾವುದೂ ಕೇಳೇ ಇರಲಿಲ್ಲ. ಮುಂದೆ ಕಾರ್ಪೊರೇಶನ್ ಸ್ಟಾಪ್‌ನಲ್ಲೇ ಇಳಿಯಬೇಕಾದ್ದರಿಂದ ಲಗ್ಗೇಜ್ ಎಲ್ಲ ಚೆಕ್ ಮಾಡಿ, ಹರಡಿದ್ದ ಕೂದಲನ್ನು ಸರಿಪಡಿಸಿ ರಬ್ಬರ್ ಬ್ಯಾಂಡ್ ಹಾಕಿಕೊಂಡೆ. ಚಪ್ಪಲಿ ಸರಿಪಡಿಸಿಕೊಳ್ಳುತ್ತಲೇ 'ಆಂಟಿ, ನಂಗೆ ಸಾಹಿತ್ಯದಲ್ಲಿ ತುಂಬಾ ಆಸಕ್ತಿ, ಸಾಹಿತ್ಯದ ಬಗ್ಗೆ ಹೆಚ್ಚು ಮಾತಾಡೋಕೇ ಆಗ್ಲಿಲ್ಲ. ನನ್ನ ತಂಗೀನೂ ಕರ್ಕೊಂಡು ನಿಮ್ಮ ಮನೆಗೆ ಬರ್ತೀನಿ. ನಿಮ್ಮ ಫೋನ್ ನಂಬರ್ ಅಡ್ರೆಸ್ ಕೊಡಿ' ಎಂದೆ. ನನ್ನ ಕೈಗೆ ಫೋನ್ ನಂಬರ್ ಇದ್ದ ಚೀಟಿ ಕೊಡುತ್ತಾ, 'ನಮ್ಮ ಮನೆ ಎಮ್.ಆರ್.ಪಿ.ಎಲ್. ಕ್ವಾರ್ಟರ್ಸ್‌ನಲ್ಲೇ ಇದ್ಯಮ್ಮ. ಖಂಡಿತ ಬನ್ನಿ, ಫೋನ್ ಮಾಡಿ, ಅಡ್ರೆಸ್ ಹೇಳ್ತೀನಿ' ಅಂದ್ರು. ಅಷ್ಟರಲ್ಲೇ ಜೋಲಿ ಹೊಡೆದು ಬಸ್ಸು ನಿಂತಿತ್ತು. ಲಗುಬಗೆಯಿಂದ ಇಳಿದು ಲಗೇಜ್ ಇಳಿಸಿ ತಲೆ ಎತ್ತಿ ನೋಡುವಷ್ಟರಲ್ಲೇ ಬಸ್ಸು ಹೋಗಿಯಾಗಿತ್ತು. ಆಂಟಿ ಹಿಂದಿರುಗಿ ನೋಡುತ್ತಾ ಕೈ ಮಾಡುತ್ತಿರುವುದು ಕಂಡು ನಾನೂ ಕೈ ಮಾಡಿದೆ. ಒಂದೇ ದಿನದಲ್ಲಿ ಎಷ್ಟೊಂದು ಆತ್ಮೀಯರಾಗಿಬಿಟ್ಟಿದ್ದರು ಆಕೆ.

ಆಟೋದಲ್ಲಿ ತಂಗಿ ಮನೆಗೆ ಬಂದಿಳಿದ ನಾನು ಮುಖ ತೊಳೆದು ಕಾಫಿ ಕುಡಿಯುತ್ತ ಬೆಳಿಗ್ಗೆಯಿಂದ ನನ್ನೊಡನೆ ಹರಟಿದ ನಾಡಿನ ಖ್ಯಾತ ಸಾಹಿತಿಯ ಬಗ್ಗೆ ಹೇಳಿ ನನಗಾದ ಆಶ್ಚರ್ಯ, ಆನಂದ ಎಲ್ಲ ಹೇಳಿದೆ. ನನ್ನ ಮಾತು ಕೇಳುತ್ತಾ ನನ್ನ ತಂಗಿ ಹಾಗೂ ಆಕೆಯ ಗಂಡ ಒಬ್ಬರ ಮುಖ ಒಬ್ಬರು ನೋಡಿಕೊಂಡರು. 'ಯಾಕೆ? ಏನಾಯ್ತು?' ಅಂದೆ ತುಸು ಗಾಬರಿಯಿಂದ. 'ವೈದೇಹಿ ಮೈಸೂರಿನವರಲ್ಲವೇ ಅಲ್ಲ. ಅವರು ಕುಂದಾಪುರದವರು. ಅದೂ ಅಲ್ಲದೆ ಆಕೆಗಿವತ್ತು ಹುಬ್ಬಳ್ಳಿಯಲ್ಲಿ ಸನ್ಮಾನ ಇದೆ. ಪೇಪರಿನಲ್ಲಿ ಫೋಟೋ ಕೂಡ ಬಂದಿದೆ ನೋಡು, ಸಣ್ಣಗೆ ಕಡ್ಡಿ ಹಾಗಿದ್ದಾರೆ...' – ತಂಗಿ, ಆಕೆಯ ಗಂಡ ಇಬ್ಬರೂ ಒಟ್ಟಿಗೇ ಸಾಕ್ಷಿ ಆಧಾರ ಸಮೇತ ಹೇಳತೊಡಗಿದ್ದರು.

'ಆಂಟಿ ಫೋನ್ ನಂಬರ್ ಕೊಟ್ಟಿದ್ದಾರೆ, ಮನೆಗೂ ಬಾ ಅಂತ ಕರೆದಿದ್ದಾರೆ... ಸುಳ್ಳು ಹೇಳುತ್ತಿದ್ದರೆ ಅಷ್ಟು ಧೈರ್ಯ ಎಲ್ಲಿ ಬರುತ್ತಿತ್ತು?' ನನ್ನ ಪ್ರಶ್ನೆಗೆ ಅವರಿಬ್ಬರ ಬಳಿ ಉತ್ತರ ಇರಲಿಲ್ಲ. ಬೆಳಗಾದ ಮೇಲೆ ತಿಂಡಿ ತಿಂದು ರೆಡಿಯಾಗಿ ಆಂಟಿಗೆ ಫೋನು ಮಾಡಿ, 'ಇಂದೇ ನಿಮ್ಮನ್ನು ನೋಡಲು ಬರುತ್ತೇವೆ' ಎಂದು ಹೇಳಿ ಹೋಗಿಬರೋಣ ಅಂದುಕೊಂಡೆವು. ಫೋನ್ ಮಾಡಿದಾಗ ರಿಂಗ್ ಆಗತೊಡಗಿತು. ಆ ಕಡೆಯಿಂದ ಉತ್ತರವಿಲ್ಲ. ಮತ್ತೆ ಮತ್ತೆ ಪ್ರಯತ್ನಿಸಿದರೂ ಅದೇ ಕತೆ. ಇನ್ನೇನು ಕೊನೆಯ ಪ್ರಯತ್ನ ಎಂಬಂತೆ ಮಾಡಿದಾಗ ಆ ಕಡೆಯಿಂದ 'ಹಲೋ...' ಎಂಬ ಧ್ವನಿ ಕೇಳಿಸಿತು. ಅದು ಆಂಟಿಯದೇ ಧ್ವನಿಯಾಗಿತ್ತು ಅಂತ ನನಗೆ ನೂರಕ್ಕೆ ನೂರು ಭಾಗ ಗೊತ್ತಾಯಿತು. ನಿನ್ನೆಯಿಡೀ ನನ್ನ ತಲೆಯನ್ನು ಗುಂಗಿಹುಳದಂತೆ ಕೊರೆದಿದ್ದು ಅದೇ ಧ್ವನಿ. ನಾನು 'ಆಂಟಿ...' ಎನ್ನುವಷ್ಟರಲ್ಲಿ ಅತ್ತ ಕಡೆಯಿಂದ ಫೋನ್ ಕೆಳಗಿಟ್ಟ ಸದ್ದು ಕೇಳಿಸಿತು. ವಿನಾಕಾರಣ ಆಕೆ ತನ್ನನ್ನು ಒಬ್ಬ ದೊಡ್ಡ ಸಾಹಿತಿ ಅಂತ ಬಿಂಬಿಸಿಕೊಂಡಿದ್ದೇಕೋ? ಅದರಲ್ಲೂ 'ವೈದೇಹಿ' ಎಂಬ ಹೆಸರನ್ನೇ ಏಕೆ ಆಯ್ದುಕೊಂಡರು? ನನ್ನ ಹತ್ತಿರ ಪ್ರಶ್ನೆಗಳನ್ನು ಬಿಟ್ಟರೆ ಇನ್ನೇನೂ ಇರಲಿಲ್ಲ. ಅವರಿಗೇನಾದರೂ ಸುಳ್ಳು ಹೇಳುವ ಕಾಯಿಲೆ ಇತ್ತಾ ಎಂಬ ಗುಮಾನಿ ಕಾಡತೊಡಗಿತ್ತು. 'ಕಂಪಲ್ಸಿವ್ ಲೈಯಿಂಗ್' ಅಂತ ಒಂದು ಮನೋವ್ಯಾಧಿ ಇದೆ ಅಂತ ಎಲ್ಲೋ ಓದಿದ ನೆನಪಾಯಿತು. ಇಂತಹ ಕಾಯಿಲೆಯಿಂದ ಬಳಲುವವರು ತಮ್ಮನ್ನು ಯಾವುದೋ ಹೆಸರಾಂತ ವ್ಯಕ್ತಿಯೋ ಎಂಬಂತೆ ಬಿಂಬಿಸಿಕೊಳ್ಳುತ್ತಾರೆ, ಅದಕ್ಕೆ ಕಾರಣವಾಗಲಿ, ಲಾಭವಾಗಲಿ ಇರಬೇಕೆಂದೇನೂ ಇಲ್ಲ. ಸುಮ್ಮನೆ ಸುಳ್ಳು ಹೇಳುವ ಖಯಾಲಿ ಈ ಜನಕ್ಕೆ.

ಯೂ ಟ್ಯೂಬ್‌ನಲ್ಲಿ 'ಟೆಡ್ ಟಾಕ್ ಶೋ'ನಲ್ಲಿ ಮನಃಶಾಸ್ತ್ರದ ಪ್ರೊಫೆಸರ್ ಒಬ್ಬಳು 'ಕಂಪಲ್ಸಿವ್ ಲೈಯಿಂಗ್' ಬಗ್ಗೆ ಹೇಳುತ್ತಿದ್ದುದು ನಾನು ಹದಿನೈದು ವರ್ಷ ಹಿಂದೆ ನಡೆದ ಘಟನೆಯನ್ನು ಮೆಲುಕು ಹಾಕುವಂತೆ ಮಾಡಿತ್ತು.